**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ07-02-2020**

**ಪಾಟೀ ಸವಾಲುಃ** 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಆರ್ ಎನ್ ಕೆ ವಕೀಲರಿಂದ

**1** ನೇ ಪ್ರತಿವಾದಿ ನನ್ನ ತಂದೆ , ನಾನು ಬಿ ಕಾಂ , ಎಂ ಬಿ ಎ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು **2001-02** ರಲ್ಲಿ ಸಕಲೇಶಪುರದಲ್ಲಿ ಪಿ ಯು ಸಿ ಓದಿರುತ್ತೇನೆ. ನಂತರ ನಾನು ಪದವಿ ವಿದ್ಯಾಭ್ಯಾಸಕ್ಕೆ **2006-07** ರಲ್ಲಿ ಬೆಂಗಳೂರಿಗೆ ಹೋಗಿರುತ್ತೇನೆ. ನಾನು **15-16** ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. **2** ನೇ ವಾದಿ ಎಂ ಬಿ ಎ ಮಾಡಿದ್ದು , ಪದವಿಯನ್ನು ಹಾಸನದಲ್ಲಿ ಮುಗಿಸಿರುತ್ತಾರೆ. ನಾನು ಪಿ.ಯು.ಸಿ ಓದುವಾಗ ಬೆಳಗೋಡು ಗ್ರಾಮದಲ್ಲಿ ವಾಸವಾಗಿದ್ದೆ. **2** ನೇ ವಾದಿಯ ಮದುವೆ **2014** ರಲ್ಲಿ ಆಗಿರುತ್ತದೆ. ನನ್ನ ತಂದೆಗೆ **70** ವರ್ಷ ಮೇಲ್ಪಟ್ಟು ವಯಸ್ಸಾಗಿದೆ. ಅವರು ಬಾಳ್ಳುಪೇಟೆಯ ಬಸವೇಶ್ವರ ನಗರದಲ್ಲಿ ಸುಮಾರು **6-7** ವರ್ಷಗಳಿಂದ ವಾಸವಾಗಿದ್ದಾರೆ , ಅದಕ್ಕಿಂತ ಪೂರ್ವದಲ್ಲಿ ನಮ್ಮ ಜೊತೆ ಬೆಂಗಳೂರಿನಲ್ಲಿ ವಾಸವಾಗಿದ್ದರು. ನನ್ನ ತಂದೆಗೆ **2011** ರಲ್ಲಿ ಹೃದಯ ಶಸ್ತ್ರ ಚಿಕಿತ್ಸೆಯಾಗಿದೆ. ನನ್ನ ತಂದೆಗೆ **2008-09** ರಲ್ಲಿ ಹೃದಯದ ಸಮಸ್ಯೆ ಇದ್ದು, ನಮಗೆ **2009** ರಲ್ಲಿ ಗೊತ್ತಾಗಿರುತ್ತದೆ. ನಾನು ಬೆಳಗೋಡಿನಲ್ಲಿ ಯಾವ ಸಾಲಿನಿಂದ ವಾಸವಾಗಿದ್ದೆ ಎಂದು ಹೇಳಲಾಗುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಗೊತ್ತಿಲ್ಲ. ನಮ್ಮ ತಂದೆ ದಾವಾ ಸಲ್ಲಿಸಿರುವ ವಿಚಾರ ನನಗೆ ಗೊತ್ತಿಲ್ಲ. ನಮ್ಮ ತಂದೆ ಈಗ ನಮ್ಮ ಜೊತೆ ವಾಸವಾಗಿಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳನ್ನು ನೋಂದಣಿ ಕಛೇರಿಯಿಂದ ತಂದು ಹಾಜರುಪಡಿಸಿರುತ್ತೇನೆ. ನಾನು ದಾವೆಯಲ್ಲಿ ಏನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ಗೊತ್ತಿಲ್ಲ. ನಾನು ತಾಲ್ಲೂಕು ಕಛೇರಿ ಮತ್ತು ನೋಂದಣಿ ಕಛೇರಿಯಿಂದ ದಾಖಲಾತಿಗಳನ್ನು ತಂದಿರುತ್ತೇನೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ನೀಡಿ ಮುಂದೂಡಲಾಯಿತು.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಿವಿಲ್ ನ್ಯಾಯಾಧೀಶರು